International Journal of Kannada Research
www.kannadajournal.com

ISSN: 2454–5813
IJKR 2021; 7(1): 01-03
© 2021 IJKR
www.kannadajournal.com
Received: 01-11-2020
Accepted: 03-12-2020

**Vinay RK**
Assistant Professor, Government First Grade College, Shikaripura, Karnataka, India

**Corresponding Author:**
**Vinay RK**
Assistant Professor, Government First Grade College, Shikaripura, Karnataka, India

# ಮಹಾಕಾವ್ಯದ ಸ್ವರೂಪ ಮತ್ತು ಲಕ್ಷಣಗಳು

**Vinay RK**

ಮಹಾಕಾವ್ಯ ಎಂಬ ಹೆಸರಿಗೆಅರ್ಹವಾಗಿರುವ ರಚನೆಗಳು ಜಗತ್ತಿನ ಸಾಹಿತ್ಯದಲ್ಲಿಯೇ ಕೇವಲ ಬೆರಳೆಣಿಕೆಗೆ ಸಾಲುವ ಸಂಖ್ಯೆಯಲ್ಲಿವೆ. ಮಹಾಕಾವ್ಯಎಂದರೇನು?ಅವುಗಳ ಲಕ್ಷಣವನ್ನುಕುರಿತ ವಿವೇಚನೆ ಬಹು ಹಿಂದಿನಿಂದಲೂ ನಡೆದು ಬಂದಿದೆ.ಭಾರತದಲ್ಲಿ ಮಹಾಕಾವ್ಯದಕುರಿತಚರ್ಚೆ ಪಾಶ್ಚಿಮಾತ್ಯರಿಗೆ ಹೋಲಿಸಿದರೆ ತೀರಾಇತ್ತೀಚಿನದು.ಈ ಮಾದರಿಯಚರ್ಚೆ ಮೊದಲು ಆರಂಭಿಸಿದವನು ಪ್ರಾಯಶಃದಂಡಿ, ಆತನತರುವಾಯ ಬಂದ ಮೀಮಾಂಸಕರು ಮಹಾಕಾವ್ಯದಕುರಿತು ವಿಪುಲವಾಗಿ ಈ ಕುರಿತು ಚರ್ಚಿಸಿದ್ದಾರೆ.ಅಂದರೆಕ್ರಿ.ಶ.ಆರನೇ ಶತಮಾನದ ನಂತರ ನಮ್ಮಲ್ಲಿ ಮಹಾಕಾವ್ಯದಚರ್ಚೆಆರಂಭವಾಯಿತುಎಂಬುದನ್ನು ಗಮನಿಸಬಹುದಾಗಿದೆ.

ಭಾರತೀಯ ಸಾಹಿತ್ಯ ಪರಂಪರೆಯಲ್ಲಿಎರಡು ಮಾದರಿಯ ಕೃತಿರಚನೆಯನ್ನುಕಾಣಬಹುದು.ಒಂದುಕಾವ್ಯಸಾಹಿತ್ಯ ಮತ್ತೊಂದು ಶಾಸ್ತ್ರಸಾಹಿತ್ಯಇವೆರಡೂ ಮಾದರಿಗಳು ರಚಿತವಾಗುತ್ತಿದ್ದುದು ಪದ್ಯರೂಪದಲ್ಲೇಆದರೆ ಕವಿಬಾಣನು 'ಕಾದಂಬರಿ' ಎಂಬ ಮಹಾಕಾವ್ಯವನ್ನುಗದ್ಯದಲ್ಲೇ ಬರೆಯುವ ಮೂಲಕ ಕಾವ್ಯಎಂದರೆ ಪದ್ಯರೂಪದಲ್ಲೇಇರಬೇಕು ಎಂಬ ಮಾದರಿಯನ್ನು ಮೊದಲಬಾರಿಗೆ ಭಂಜಿಸಿದ.ನಂತರಕಾವ್ಯವು ಪದ್ಯ ಹಾಗೂ ಗದ್ಯಎರಡರಲ್ಲೂ ಸಾಧಿಸಬಹುದು, ಮಹಾಕಾವ್ಯರಚನೆಗೆಕವಿಯ ಪ್ರತಿಭೆ ಮುಖ್ಯ, ಗದ್ಯ–ಪದ್ಯ ಎಂಬ ನಿಕಷ ಮುಖ್ಯವಲ್ಲಎಂದು ಮೀಮಾಂಸಕರು ತೀರ್ಮಾನಿಸಿದಂತಿದೆ. " ಮಹಾಕಾವ್ಯವು ಪದ್ಯಾತ್ಮಕವಾದದ್ದು" ಎಂಬ ಪರಿಕಲ್ಪನೆ ಮಾಯವಾಗಿ "ಮಹಾಕಾವ್ಯವುಗದ್ಯಮಯ, ಪದ್ಯಮಯ, ಉಭಯಮಯ" ಎಂದು ಡಾ.ಟಿ.ವಿ.ವೆಂಕಟಾಚಾಲಶಾಸ್ತ್ರಿಯವರು ತಮ್ಮ 'ಮಹಾಕಾವ್ಯ ಲಕ್ಷಣ' ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು.ಬಹುಶಃ ಗದ್ಯ ಮತ್ತು ಪದ್ಯಮಿಶ್ರಿತ 'ಚಂಪೂ' ಕನ್ನಡದ ಈ ನೆಲದಲ್ಲಿ ವಿಪುಲವಾಗಿ ಬೆಳೆಯಲು ಈ ಮಾದರಿಕಾರಣವಾಗಿರಬೇಕುಎನ್ನಬಹುದಾಗಿದೆ.

ಮಹಾಕಾವ್ಯಎಂದರೆ" ಗಂಭೀರವಾದ ಛಂದಸ್ಸಿನಲ್ಲಿ ರಚಿತವಾಗುವಒಂದು ಸುದೀರ್ಘವಾದಕಥನಕಾವ್ಯಎನ್ನುವುದೇ ಬಹುಜನ ಸಮ್ಮತವಾದ ಸೂತ್ರವಾಗಿದೆಎಂದು ಡಾ.ಜಿ.ಎಸ್.ಶಿವರುದ್ರಪ್ಪನವರು ತಮ್ಮ ಮಹಾಕಾವ್ಯ ಸ್ವರೂಪ ಎಂಬ ಕೃತಿಯಲ್ಲಿಉಲ್ಲೇಖಿಸುತ್ತಾರೆ. ಮುಂದುವರೆದು ಮಹಾಕಾವ್ಯ ಎಂಬ ಮಾತಿನಲ್ಲೇಇರುವ 'ಮಹಾ' ಎಂಬುದುಅದರಗಾತ್ರವನ್ನು, ವಿಸ್ತಾರವನ್ನು, ಆಂತರಿಕ ಸತ್ವಾತಿಶಯವನ್ನುಒಟ್ಟಿಗೆ ಸೂಚಿಸುತ್ತದೆಎಂದು ವಿವರಿಸುತ್ತಾರೆ.

ಭಾರತೀಯ ಲಾಕ್ಷಣಿಕರು ಮಹಾಕಾವ್ಯದ ಲಕ್ಷಣಗಳನ್ನು ಮುಖ್ಯವಾಗಿರಾಮಾಯಣ, ಮಹಾಭಾರತಗಳ ಮಾದರಿಯ ಹಿನ್ನೆಲೆಯಲ್ಲಿಗುರುತಿಸುತ್ತಾ ಬಂದಿದ್ದಾರೆ, ಈಗಾಗಲೇ ಹೇಳಿರುವಂತೆ ಭಾರತದಲ್ಲಿ ಮಹಾಕಾವ್ಯದಚರ್ಚೆಆರಂಭವಾದದ್ದು ಕ್ರಿ.ಶ.೬–೭ ನೇ ಶತಮಾನದಲ್ಲಿ.ದಂಡಿ, ಭಾಮಹಇವರೇ ಮಹಾಕಾವ್ಯಗಳ ಲಕ್ಷಣಗಳನ್ನು ಹೇಳಿದ ಮೊದಲಿಗರುಅಲ್ಲಿಂದ ಹತ್ತೊಂಭತ್ತನೇ ಶತಮಾನದವರೆಗೂ ಮಹಾಕಾವ್ಯ ಲಕ್ಷಣಗಳನ್ನು ಕುರಿತು ಅನೇಕ ಲಾಕ್ಷಣಿಕರು ವಿವರಿಸುತ್ತಾ ಬಂದಿದ್ದಾರೆ.

ಉಪಲಬ್ಧವಿರುವಕಾವ್ಯಲಕ್ಷಣ ಗ್ರಂಥಗಳಲ್ಲಿ ಭಾಮಹನ 'ಕಾವ್ಯಾಲಂಕಾರ' ವೇ ಮೊದಲ ಮಹಾಕಾವ್ಯ ವಿಚಾರ ಲಕ್ಷಣಗಳನ್ನು ಪ್ರತಿಪಾದಿಸುವ ಗ್ರಂಥವಾಗಿದೆ.ಅದರಲ್ಲಿ ಮಹಾಕಾವ್ಯಎಂದರೆ ಸರ್ಗಗಳಿಂದ ಕೂಡಿದ್ದು, (ಮಹಾಕಾವ್ಯ) ಅದು ಮಹಾಪುರುಷ ಸಂಬಂಧಿಯಾದದ್ದು, ಪರಿಮಾಣದಲ್ಲಿ ಮಹತ್ತಾದುದು, ಶಬ್ಧಗಳಲ್ಲಿ ಅಗ್ರಾಮ್ಯತೆಯಿಂದಕೂಡಿದ್ದು, ಅರ್ಥದಲ್ಲಿಗುರುತ್ವ ಇವುಗಳನ್ನೊಳಗೊಂಡದ್ದು, ಅಲಂಕಾರಯುಕ್ತವು, ಉತ್ತಮ ವಸ್ತುಗಳನ್ನೊಳಗೊಂಡಿರಬೇಕು, ಅದರಲ್ಲಿ ಮಂತ್ರಾಲೋಚನೆ, ದೂತರು, ಪ್ರಯಾಣ, ಯುದ್ಧ, ನಾಯಕಾಭ್ಯುದಯಇತ್ಯಾದಿ ಅಷ್ಟಾದಶವರ್ಣನೆಗಳಿಂದ ಕೂಡಿದಕಾವ್ಯವುಆರಂಭದಿಂದ ನಾಯಕನ ಹಿರಿಮೆಯನ್ನು ವರ್ಣಿಸಿರಬೇಕು, ಕಾವ್ಯಾಂತ್ಯವು

ನಾಯಕನಅಭ್ಯುದಯದಿಂದಲೇ ಆಗಬೇಕು ಎಂದು ಮೊದಲಬಾರಿ ತಿಳಿಸುತ್ತಾನೆ.

ಆ ನಂತರ ಬಂದದಂಡಿತನ್ನ 'ಕಾವ್ಯಾದರ್ಶ' ದಲ್ಲಿ" ಒಂದಕ್ಕಿಂತ ಹೆಚ್ಚು ಸರ್ಗಗಳು ಸೇರಿ ಆಗುವ ಪ್ರಬಂಧವು 'ಮಹಾಕಾವ್ಯ' ವೆನಿಸುತ್ತದೆ, ಅದರಲ್ಲಿಇತಿಹಾಸವಾಗಲಿ, ಕಥೆಯಾಗಲಿ ಮಹಾಕಾವ್ಯಕ್ಕೆ ಮೂಲವಾಗಬಹುದು, ಇದಲ್ಲದೇ ಬೇರೆ ಸತ್ಪುರುಷರನ್ನುಕುರಿತು ಮಹಾಕಾವ್ಯರಚಿಸಬಹುದು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಫಲಪ್ರಾಪ್ತಿಗೆಅಧೀನವಾಗಿರುತ್ತದೆ. ನಾಯಕನುಚತುರನೂ, ಉದಾತ್ತನೂಆಗಿರುತ್ತಾನೆ. ಊರು, ಕಾಡು, ಬೆಟ್ಟ, ಚಂದ್ರೋದಯ, ಸೂರ್ಯೋದಯ ಇವುಗಳ ವರ್ಣನೆಗಳಿಂದಲೂ; ವನವಿಹಾರ, ಜಲಕ್ರೀಡೆ, ಮಧುಪಾನವಿನೋದ, ಸುರತೋತ್ಸವಗಳಿಂದಲೂ, ವಿಯೋಗಗಳಿಂದಲೂ, ವಿವಾಹಗಳಿಂದಲೂ ಕುಮಾರಜನನದ ವರ್ಣನೆಗಳಿಂದಲೂ, ಮಂತ್ರಾಲೋಚನೆ, ದೂತಕಾರ್ಯ, ವಿಜಯಯಾತ್ರೆ, ಯುದ್ಧ, ನಾಯಕನವಿಜಯಗಳಿಂದಲೂ ಅಲಂಕೃತವಾಗಿ ಸಂಕ್ಷೇಪವಾಗಿರದೇ ರಸಭಾವಗಳಿಂದ ನಿಬಿಡವಾಗಿರುತ್ತಾ, ಅತೀವಿಸ್ತಾರವಲ್ಲದ, ಕಿವಿಗಿಂಪಾದ ವೃತ್ತಗಳಿಂದ ಕೂಡಿದ, ಒಳ್ಳೆಯ ಸಂಧಿಗಳಿರುವ ಮತ್ತು ಮೊದಲಿನ ವೃತ್ತಗಳಿಂದ ಬೇರೆಯಾದ ವೃತ್ತಗಳು ಕಡೆಯಲ್ಲಿ ಬರುವಂತೆ ಸಂಯೋಜಿಸಿರುವ ಸರ್ಗಗಳಿಂದ ಕೂಡಿದಅಲಂಕಾರಸಹಿತವಾದಕಾವ್ಯ ಲೋಕರಂಜನೆಯನ್ನುಕೊಡುವುದಲ್ಲದೆ, ಕಲ್ಪಾಂತರದವರೆಗೆಚಿರಸ್ಥಾಯಿಯಾಗಿ ನಿಲ್ಲುವುದು. ನಾಯಕನನ್ನುಗುಣವಂತನೆಂದು ಮೊದಲು ವರ್ಣಿಸಿ ಅವನು ಶತ್ರುಗಳನ್ನು ಸೋಲಿಸದನೆಂದು ಹೇಳುವ ಕ್ರಮವು ಸ್ವಾಭಾವಿಕವಾಗಿಯೇರಮಣೀಯವೆನಿಸುತ್ತದೆ.ಮೊದಲು ಶತ್ರುವಿನ ವಂಶ, ವೀರ್ಯ, ವಿದ್ಯೆ ಮುಂತಾದ ಗುಣಗಳನ್ನು ವರ್ಣಿಸಿ ಅಂಥವನನ್ನುಗೆದ್ದ ನಾಯಕನಿಗೆ ಮತ್ತೂ ಹೆಚ್ಚಿನಉತ್ಕರ್ಷವನ್ನುಒದಗಿಸುತ್ತದೆಎಂದು ವಿವರಿಸುತ್ತಾನೆ.

ದಂಡಿಯ ಮಹಾಕಾವ್ಯ ಲಕ್ಷಣದ ನಿರೂಪಣೆಯನ್ನು ಭಾಮಹನ ನಿರೂಪಣೆಯೊಂದಿಗೆ ಹೋಲಿಸಿ ನೋಡಿದರೆದಂಡಿಯುಭಾಮಹನನ್ನು ಅನುಸರಿಸಿರುವುದು ಸ್ಪಷ್ಟವಾಗಿಗೋಚರಿಸುತ್ತದೆ. ಭಾಮಹ, ದಂಡಿ ವಿವರಿಸುವ ಲಕ್ಷಣ, ಸ್ವರೂಪಗಳನ್ನೇ ಮುಂದೆ ಬರುವ ಲಾಕ್ಷಣಿಕರುಅಂದರೆಜಿನಸೇನಾಚಾರ್ಯ(ಪೂರ್ವಪುರಾಣ), ವಾಮನ (ಕಾವ್ಯಾಲಂಕಾರ), ರುದ್ರಟ ( ಕಾವ್ಯಾಲಂಕಾರ), ಆನಂದವರ್ಧನ (ಧ್ವನ್ಯಾಲೋಕ), ಭೋಜದೇವ (ಸರಸ್ವತಿಕಂಠಾಭರಣ), ಹೇಮಚಂದ್ರ (ಕಾವ್ಯಾನುಶಾಸನ), ಎರಡನೇ ವಾಗ್ಭಟ ( ಕಾವ್ಯಾನುಶಾಸನ), ವಿಶ್ವನಾಥ (ಸಾಹಿತ್ಯದರ್ಪಣ), ವಿದ್ಯಾನಾಥ (ಪ್ರತಾಪರುದ್ರಯಶೋಭೂಷಣ), ಇವರುಗಳು ಅಲ್ಪಸ್ವಲ್ಪ ಮಾರ್ಪಾಟಿನೊಂದಿಗೆ ಮೂಲಮಾದರಿಯನ್ನೇ ಅನುಸರಿಸಿ ಮಹಾಕಾವ್ಯ ಲಕ್ಷಣಗಳನ್ನು ವಿವರಿಸುತ್ತಾ ಹೋಗುತ್ತಾರೆ.

ಕನ್ನಡದಲ್ಲಿ ಮಹಾಕಾವ್ಯದಕುರಿತು ಮೊದಲು ಮಾತನಾಡಿದವನೆಂದರೆಕವಿರಾಜಮಾರ್ಗಕಾರ, ತನ್ನಕೃತಿಯತೃತೀಯ ಪರಿಚ್ಛೇದದಲ್ಲಿ ಮಹಾಕಾವ್ಯ ಲಕ್ಷಣಗಳನ್ನು ಕುರಿತು ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾನೆ, ಅದರತಾತ್ಪರ್ಯವನ್ನು ಸಂಗ್ರಹಿಸಿ ಹೇಳಬಹುದಾದರೆ' ಮಹಾಕಾವ್ಯವುಇತಿಹಾಸವನ್ನಾಗಲಿ, ಕಥೆಯನ್ನಾಗಲಿ ಅಥವಾ ಮಹಾಪುರುಷರಚರಿತ್ರೆಯನ್ನಾಗಲಿ ಆಶ್ರಯಿಸಿ ರಚನೆಯಾಗುತ್ತದೆ. ಚತುರ್ವರ್ಗಗಳನ್ನು ಪ್ರತಿಪಾದಿಸುವ ಆಖ್ಯಾನದಿಂದ ವಿಖ್ಯಾತವಾಗಿರುತ್ತದೆ.ನಗರ, ದೇಶ, ಪರ್ವತ, ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ, ಚಂದ್ರಾಸ್ತ, ಮೃಗಗಣ, ಉದ್ಯಾನಕ್ರೀಡೆ, ಜಲಕ್ರೀಡೆ, ಮಧುಪಾನ, ಪ್ರಿಯಸಂಯೋಗ, ವಿಪ್ರಲಂಭ, ವಿವಾಹ, ಕುಮಾರೋದಯ, ಮಂತ್ರ, ದೂತ, ಪ್ರಯಾಣ, ಸಂಗ್ರಾಮ, ನಾಯತೋತ್ಕರ್ಷ ಇವುಗಳಿಂದ ಕೂಡಿರುತ್ತದೆ.ಒಳ್ಳೆಯ ಅಲಂಕಾರಗಳಿರುತ್ತವೆ. ಲಲಿತ ಪದಪ್ರಯೋಗಗಳಿರುತ್ತವೆ. ಶ್ರವ್ಯವಾದ ನಾನಾ ವೃತ್ತಜಾತಿಗಳನ್ನು ಬಳಸಿರುತ್ತದೆ, ರಸವಿಶೇಷಗಳಿಂದ ವ್ಯಾಪ್ತವಾಗಿರುತ್ತದೆ.ಯುಕ್ತಿ ಮತ್ತು ಲೋಕಪ್ರತೀತಿ ಇವುಗಳನ್ನು ಅವಲಂಬಿಸಿರುತ್ತದೆ.ಸಕಲಾಭಿರಾಮವಾಗಿರುತ್ತದೆ, ಅನತಿ ವಿಸ್ತಾರವಾಗಿರುತ್ತದೆ.ಅಂತಿಮ ಪುರುಷಾರ್ಥ ಸಾಧನೆಗೆ ಸಹಕಾರಿಯಾಗಿರುತ್ತದೆ, ದೋಷರಹಿತವಾಗಿರುತ್ತದೆ.ಪ್ರಾಚೀನರ ಸಾರ್ಥಕವಾದ ಸಂಗತಿ ವಿಶೇಷದಿಂದ ಸಮನ್ವಿತವಾಗಿರುತ್ತದೆ.ನಾನಾ ಶಬ್ದಸಂಪನ್ನವಾಗಿರುತ್ತದೆ, ಗುಣಸಂಪನ್ನವಾಗಿರುತ್ತದೆ ಹೀಗೆ ಅತಿಶಯವಾಗಿರುವ ವರ್ಣನೆಯನ್ನು ಸಮಗ್ರವಾಗಿ ಒಳಗೊಂಡಂತೆ ರಚಿಸಿದ ಕಾವ್ಯವುಆಕಲ್ಪಾಂತಸ್ಥಾಯಿಯಾಗಿರುತ್ತದೆಎಂದು ವಿವರಿಸುತ್ತಾನೆ.

ಕವಿರಾಜಮಾರ್ಗವುಕನ್ನಡದಲ್ಲಿ ಮಹಾಕಾವ್ಯ ಲಕ್ಷಣಗಳನ್ನು ಹೇಳುವ ಮೊದಲ ಗ್ರಂಥವಾದರುಇದರಲ್ಲಿದಂಡಿಯಕಾವ್ಯಾದರ್ಶದಯತೋಚ್ಚಿತವಾದ ಪ್ರಭಾವವಿದೆಆದರೆಇದುಯಥಾವತ್ತಾದಅನುವಾದವಲ್ಲ, ಇಲ್ಲಿಯ ಕೆಲವು ಅಂಶಗಳನ್ನು ಮಾತ್ರ ಶ್ರೀವಿಜಯನು ಎತ್ತಿಕೊಂಡು ಬಿತ್ತರಿಸಲು ಹೊರಟಿದ್ದಾನೆ. ಈತನ ನಂತರ ಬಂದ ನಾಗವರ್ಮ(ಕಾವ್ಯಾವಲೋಕನ), ಉದಯಾದಿತ್ಯ (ಉದಯಾದಿತ್ಯಾಲಂಕಾರ), ಮಲ್ಲಿಕಾರ್ಜುನ (ಸೂಕ್ತಿಸುಧಾರ್ಣವ), ಮಾಧವ ಈ ಎಲ್ಲಕನ್ನಡದಅಲಂಕಾರಿಕರುಒಂದಲ್ಲಾಒಂದುರೀತಿಯಲ್ಲಿ ಮಹಾಕಾವ್ಯದ ಲಕ್ಷಣವನ್ನು ಹೇಳಲು ದಂಡಿಯಕಾವ್ಯಾದರ್ಶದ ನೆರವನ್ನು ಪಡೆದಿದ್ದಾರೆ.

ಒಟ್ಟಾರೆಯಾಗಿ ಭಾರತೀಯ ಲಾಕ್ಷಣಿಕರು ನಿರೂಪಿಸಿರುವ ಮಹಾಕಾವ್ಯ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು

೧) ಮಹಾಕಾವ್ಯವು ಹೆಚ್ಚು ಸರ್ಗಗಳಿಂದ ಕೂಡಿರುತ್ತದೆ,
೨) ಅತಿಸಂಕ್ಷಿಪ್ತವೂಅತಿ ವಿಸ್ತಾರವೂಆಗಿರುವುದಿಲ್ಲ,
೩) ಇತಿಹಾಸ, ಕಥೆಅಥವಾ ಮಹಾಪುರುಷರಂಚರಿತ್ರೆಯನ್ನು ವಸ್ತುವಾಗಿಸಿಕೊಂಡಿರುತ್ತದೆ
೪) ಉದಾತ್ತನಾದ ನಾಯಕನನ್ನು ಹೊಂದಿರುತ್ತದೆ. ಅವನ ಅಭ್ಯುದಯವನ್ನುಚಿತ್ರಿಸುತ್ತದೆ.
೫) ನಗರ, ಸಮುದ್ರ, ಪರ್ವತ, ಮಂತ್ರ, ದ್ಯೂತ, ಪ್ರಯಾಣ, ಯುದ್ಧ, ಮುಂತಾದ ಅಷ್ಟಾದಶವರ್ಣನೆಗಳಿಂದ ಕೂಡಿರಬೇಕು
೬) ಚತುರ್ವರ್ಗ ಫಲಪ್ರಾಪ್ತಿಗೆ ಸಾಧಕವಾಗಿರಬೇಕು
೭) ರಸಾನುಗುಣವಾದ ಛಂದಸ್ಸಿನಲ್ಲಿ ಅಂದರೆ ಬಗೆಬಗೆಯ ಛಂದಸ್ಸಿನಲ್ಲಿ ರಚಿತವಾದುದಾಗಿರಬೇಕು.
೮) ಉತ್ತಮ ಪದವಿನ್ಯಾಸದಿಂದ, ಶ್ರವಣಹಿತವಾದ ಬಂಧದಿಂದಆಹ್ಲಾದಕರವಾದಅರ್ಥದಿಂದ ಸಂಪನ್ನವಾಗಿರಬೇಕು
೯) ಗದ್ಯರೂಪದಲ್ಲಿರಬಹುದು, ಪದ್ಯರೂಪದಲ್ಲಿರಬಹುದುಅಥವಾಗದ್ಯಪದ್ಯವಾದರೂಪದಲ್ಲಿರಬಹುದು.

ಹೀಗೆ ಮಹಾಕಾವ್ಯಗಳ ಸ್ವರೂಪ, ಲಕ್ಷಣಗಳನ್ನು ಪಟ್ಟಿಮಾಡುತ್ತಾ ಹೋದರೆ ಕಾಲಕಾಲಕ್ಕೆ ಇದು ಪರಿಷ್ಕರಣೆಗೊಳಗಾಗುತ್ತಾ ಬಂದಿರುವುದನ್ನುಕಾಣಬಹುದಾಗಿದೆ, ಇದುಆಯಾಯುಗಧರ್ಮಕ್ಕೆ, ತತ್ಕಾಲೀನ ಪ್ರಜ್ಞೆಗೆ ಬದಲಾದುದನ್ನುಕಾಣಬಹುದು.ಒಟ್ಟಿನಲ್ಲಿ ಮಹಾವಸ್ತು, ಮಹಾಶೈಲಿ, ಮಹಾಛಂದಸ್ಸು, ಮಹಾಚಿಂತನೆ, ಮಹಾಕಲ್ಪನೆ, ಮಹಾಪ್ರತಿಭೆ, ಮಹಾಸಂಸ್ಕೃತಿಗಳ ಅದ್ಭುತ ರಸಪಾಕಗಳ ಲಕ್ಷಣಗಳನ್ನೊಳಗೊಂಡಿದ್ದೇ ಮಹಾಕಾವ್ಯ.

**ಪರಾಮರ್ಶನ ಗ್ರಂಥಗಳು**


೧. ಕೀರ್ತಿನಾಥಕುತುಕೋಟಿ, ಯುಗಧರ್ಮ ಮತ್ತು ಸಾಹಿತ್ಯದರ್ಶನ,ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ಬೆಂಗಳೂರು, ೧೯೮೩.
೨. ಶೇಷಗಿರಿರಾವ್.ಎಲ್.ಎಸ್., ಹೊಸಗನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು. ೧೯೬೮.
೩. ಮಹಾಪತನ – ಸಂತೋಷ್‌ಕುಮಾರ್ ಮೆಹಂದಳೆ, ಸ್ನೇಹ ಬುಕ್ ಹೌಸ್, ಬೆಂಗಳೂರು.
೪. ಮಹಾಕಾವ್ಯ ಸ್ವರೂಪ– ಜಿ,ಎಸ್,ಶಿವರುದ್ರಪ್ಪ, ಸ್ವಪ್ನ ಬುಕ್ ಹೌಸ್, ಬೆಂಗಳೂರು.
೫. ಮತ್ತೊಂದು ಮಹಾಭಾರತ– ಡಾ.ಸಿ,ಎಂ.ಗೋವಿಂದರೆಡ್ಡಿ
೬. ರಾಮಾಯಣಒಂದು ಹೊಸ ಓದು– (ಅನುವಾದ) – ಡಾ. ಬಿ,ಎನ್.ವಾಸುದೇವಮೂರ್ತಿ